**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 27-03-2023.**

**ಪಾಟೀ ಸವಾಲು - ಪ್ರತಿವಾದಿ ನಂ.3 ರವರ ವಾರಸ್ಸುದಾರರ ಪರ ವಕೀಲರಿಂದ :**

**1)** ದಾವೆ ಹಾಕುವಾಗ ಮಾಹಿತಿಯನ್ನು ವಕೀಲರಿಗೆ ನಾವೇ ನೀಡಿರುತ್ತೇವೆ. ನಮ್ಮಮಾಹಿತಿಯ ಮೇರೆಗೆ ವಕೀಲರು ವಾದ ಪತ್ರ ತಯಾರಿಸುತ್ತಾರೆ. ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇವೆ.

**2)** ನಮ್ಮ ತಾತನ ಹೆಸರು ಬಿಕ್ಕಲ ಸೊಣ್ಣಪ್ಪ. ನಮ್ಮ ತಾತನ ಮೂಲ ಊರು ಜಾಲ ಹೋಬಳಿ, ಹೊಸಹಳ್ಳಿ ಗ್ರಾಮ. ನನ್ನ ತಾತನನ್ನು ನಾನು ನೋಡಿಲ್ಲ. ಅವರು ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. ಸದರಿ ಗ್ರಾಮದಲ್ಲಿ ನಮ್ಮ ತಾತನಿಗೆ ಏನು ಆಸ್ತಿಗಳು ಇದ್ದವು ಎಂದು ಗೊತ್ತಿಲ್ಲ. ಸೊಣ್ಣಪ್ಪನಿಗೆ ಹೊಸಹಳ್ಳಿಯಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ, ಆತ ಆ ಕೆಲಸ ಈ ಕೆಲಸ ಮಾಡಿಕೊಂಡು ಬದುಕಿದ್ದ ಎಂದರೆ ಗೊತ್ತಿಲ್ಲ.

**3)** ಪ್ರತಿವಾದಿ ನಂ.2 ಮತ್ತು 3 ರವರ ತಂದೆ ಲಕ್ಷ್ಮಯ್ಯನ ಮೂಲ ಉದ್ಯೋಗ ವ್ಯವಸಾಯ ಎಂದರೆ ಸರಿ. ಲಕ್ಷ್ಮಯ್ಯ ಮತ್ತು ನಮ್ಮ ತಾತನಿಗೂ ಮನೆಯಲ್ಲಿ ಸರಿ ಬಿಳದೇ ಜಗಳಗಳಾಗುತ್ತಿದ್ದವು ಎಂದರೆ ಗೊತ್ತಿಲ್ಲ. ಆಗ 1952 ರಲ್ಲಿ ಲಕ್ಷ್ಮಯ್ಯ ಹೊಸಹಳ್ಳಿ ಬಿಟ್ಟು ಬಾಗಲೂರಿಗೆ ಬಂದರು ಎಂದರೆ ಸಾಕ್ಷಿಯು ಲಕ್ಷ್ಮಯ್ಯ ಮತ್ತು ನಾಗಪ್ಪ ಇಬ್ಬರೂ ಬಂದರು ಎಂದು ಹೇಳುತ್ತಾರೆ. ಸದರಿ ಲಕ್ಷ್ಮಯ್ಯನಿಗೆ ಬಾಗಲೂರಿಗೆ ಬಂದಾಗ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿ. ಆಗ ಲಕ್ಷ್ಮಯ್ಯ ಬೇರೆಯವರ ಆಸ್ತಿಯನ್ನು ಉಳುಮೆ ಮಾಡಿ ಸಂಪಾದಿಸುತ್ತಿದ್ದರು ಎಂದರೆ ಸರಿ. ನಾಗಪ್ಪ ಸಹ ಉಳುಮೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆಗ ನಾಗಪ್ಪನಿಗೆ ಎಷ್ಟು ವಯಸ್ಸು ಎಂದು ನನಗೆ ಗೊತ್ತಿಲ್ಲ.

**4)** ದಾವಾ ಆಸ್ತಿಗಳಲ್ಲಿ ಪಿತ್ರಾರ್ಜಿತ ಆಸ್ತಿಗಳು ಯಾವುವು ಇಲ್ಲ, ನಾಗಪ್ಪ ಮತ್ತು ಲಕ್ಷ್ಮಯ್ಯ ಒಟ್ಟು ಕುಟುಂಬದಲ್ಲಿ ಇದ್ದಾಗ ಜಂಟಿ ಆಸ್ತಿಗಳು ಇರುತ್ತವೆ ಎಂದು ಹೇಳುತ್ತಾರೆ. ಯಾವಾಗ, ಯಾರಿಂದ ಮತ್ತು ಎಷ್ಟು ಹಣಕ್ಕೆ ಖರೀದಿಸಿದ್ದರು ಎಂದು ಗೊತ್ತಿಲ್ಲ. ಸಾಕ್ಷಿಯು ಬಾಗಲೂರು ಮತ್ತು ಸಾತನೂರಿನಲ್ಲಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. ಬಾಗಲೂರಿನಲ್ಲಿ ಯಾವ ಸರ್ವೆ ನಂಬರ್ ಆಸ್ತಿ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ಸಾತನೂರಿನಲ್ಲಿ ಯಾವ ಆಸ್ತಿ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ನಂ.1 ರಿಂದ 7 ಆಸ್ತಿಗಳನ್ನು ದಿನಾಂಕ: 06-10-1953 ರಲ್ಲಿ ಲಕ್ಷ್ಮಯ್ಯ ಖರೀದಿಸಿದ್ದರು ಎಂದರೆ ಲಕ್ಷ್ಮಯ್ಯ ಮತ್ತು ನಾಗಪ್ಪ ಒಟ್ಟಾಗಿ ಖರೀದಿಸಿದ್ದರು ಎಂದು ಹೇಳುತ್ತಾರೆ. ಒಟ್ಟಾಗಿ ಖರೀದಿಸಿದ್ದರು ಎಂದು ತೋರಿಸಲು ದಾಖಲೆ ಇಲ್ಲ, ಆದರೆ ಅವರು ಒಟ್ಟು ಕುಟುಂಬದಲ್ಲಿ ಇದ್ದಾಗ ದುಡಿದು ಖರೀದಿಸಿದ್ದರು. ಸದರಿ ಆಸ್ತಿಗಳನ್ನು ಲಕ್ಷ್ಮಯ್ಯ ಮಾತ್ರ ತಮ್ಮ ಸ್ವಂತ ಹಣದಿಂದ ಖರೀದಿಸಿದ್ದರು ಅದಕ್ಕೆ ಬೇರೆ ಯಾರದ್ದು ಸಹಾಯ ಇಲ್ಲ ಎಂದರೆ ಸರಿಯಲ್ಲ. ಇಬ್ಬರು ಯಾವ ವರ್ಷದಿಂದ ಒಟ್ಟು ಕುಟುಂಬದಲ್ಲಿ ಇದ್ದರು ಎಂದು ಗೊತ್ತಿಲ್ಲ. ಆ ಇಬ್ಬರು ಸಹೋದರರು ಒಟ್ಟು ಕುಟುಂಬದಲ್ಲಿ ಇದ್ದರು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ಯಾವ ದಾಖಲೆ ಎಂದರೆ ಸಾಕ್ಷಿಯು ನಿಖರವಾದ ಉತ್ತರ ನೀಡಿರುವುದಿಲ್ಲ.

**5)** ದಾವಾ ಆಸ್ತಿ ಖರೀದಿಸಿದಾಗಿನಿಂದ ಖಾತೆ - ಪಹಣಿ ಲಕ್ಷ್ಮಯ್ಯನ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿ. ಅವರು ಜೀವಂತವಿದ್ದಾಗ ಅವರೇ ವ್ಯವಸಾಯ ಮಾಡುತ್ತಿದ್ದರು ಎಂದರೆ ಅಣ್ಣ - ತಮ್ಮಂದಿರು ಇಬ್ಬರೂ ವ್ಯವಸಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಲಕ್ಷ್ಮಯ್ಯ ತೀರಿಕೊಂಡ ನಂತರ ಆತನ ಹೆಂಡತಿ ಮಕ್ಕಳ ಹೆಸರಿನಲ್ಲಿ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಈಗ ಯಾರ ಹೆಸರಿನಲ್ಲಿ ಖಾತೆ ಬರುತ್ತಿದೆ ಎಂದು ನೋಡಿ ತಿಳಿದುಕೊಂಡಿಲ್ಲ. ದಾವಾ ಆಸ್ತಿಗಳು ಲಕ್ಷ್ಮಯ್ಯನ ಹೆಂಡತಿ ಮಕ್ಕಳ ಹೆಸರಿನಲ್ಲಿ ಖಾತೆ ಆಗಿದೆ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅದಕ್ಕೂ ಮೊದಲೇ ನಾವು ದಾವೆ ಹಾಕಿರುತ್ತೇವೆ ಎಂದು ಹೇಳುತ್ತಾರೆ.

**6)** ಈ ಹಿಂದೆ ನನ್ನ ತಂದೆ ದಾವೆ ಸಂಖ್ಯೆ : 86/2000 ದಾವೆ ಹಾಕಿದ್ದರು ಎಂದರೆ ದಾವೆ ಹಾಕಿದ್ದರು ನಂಬರ್ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಯಾವ ಯಾವ ಆಸ್ತಿಗಳ ಮೇಲೆ ದಾವೆ ಹಾಕಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ, 10 ಆಸ್ತಿಗಳ ಮೇಲೆ ಹಾಕಿದ್ದರು. ಸದರಿ ದಾವೆ ಹಾಕುವಾಗ ನನ್ನ ದೊಡ್ಡಪ್ಪ ಲಕ್ಷ್ಮಯ್ಯ ಬದುಕಿದ್ದರು ಎಂದರೆ ಸರಿ. 2000 ನೇ ಇಸವಿಯಲ್ಲಿ ನನಗೆ 25 ವರ್ಷ ವಯಸ್ಸು. ಅವತ್ತಿನ ಕಾಲಕ್ಕೆ ಆ ದಾವೆ ಹಾಕಿರುವುದು ನನಗೆ ಗೊತ್ತು. ಸದರಿ ದಾವೆಯ ಬಗ್ಗೆ ತಿಳಿದುಕೊಂಡು ಈ ದಾವೆಯಲ್ಲಿ ಕಾಣಿಸಿದ್ದೇವೆ ಎಂದರೆ ಸರಿ. ಸದರಿ ದಾವೆಯನ್ನು ಯಾವ ದಿನಾಂಕದಂದು ಹಾಕಿದ್ದರು ಎಂದು ಹೇಳಲು ಆಗುವುದಿಲ್ಲ. ಸದರಿ ದಾವೆ ಹಾಕಿದ ನಂತರ ನಮ್ಮ ದೊಡ್ಡಪ್ಪನಿಗೆ ನೋಟೀಸ್ ಜಾರಿ ಆಗಿರುವುದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಮ್ಮ ನೋಟೀಸ್ ಜಾರಿ ಆಗುವ ಮೊದಲೇ ಲಕ್ಷ್ಮಯ್ಯ ತೀರಿಕೊಂಡಿದ್ದರು ಎಂದರೆ ಸರಿಯಲ್ಲ. ಲಕ್ಷ್ಮಯ್ಯ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ, ಕಾರಣ ನಾನು ಓದಿಲ್ಲ.

**7)** ನಮ್ಮ ತಂದೆ ಹಾಕಿದ ಕೇಸು ಏನಾಯಿತು ಎಂದರೆ ಸಾಕ್ಷಿಯು ಊರಿನಲ್ಲಿ ರಾಜೀ ಪಂಚಾಯಿತು ಮಾಡಿಸುತ್ತೇವೆ ಎಂದು ವಾಪಸ್ಸು ಪಡೆಸಿರುತ್ತಾರೆ ಎಂದು ಹೇಳುತ್ತಾರೆ. ಲಕ್ಷ್ಮಯ್ಯ ಈ ಬಗ್ಗೆ ಯಾವಾಗ ಮತ್ತು ಯಾವ ವರ್ಷದಲ್ಲಿ ಹೇಳಿದ್ದರು ಎಂದು ಗೊತ್ತಿಲ್ಲ. ಸದರಿ ದಾವೆ ಹಾಕಿದ ಆರು ತಿಂಗಳ ನಂತರ ನಮ್ಮ ದೊಡ್ಡಪ್ಪ ಆ ರೀತಿ ಹೇಳಿರುತ್ತಾರೆ. ಹಕ್ಕು ಬಿಟ್ಟು ಪತ್ರ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೇನೆ ಆ ಬಗ್ಗೆ ಮಾತುಕತೆ ಯಾವಾಗ ಆಯಿತು ಎಂದರೆ ಸದರಿ ದಾವೆ ಹಾಕಿದ ಆರು ತಿಂಗಳ ನಂತರ ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ದಾವೆ ಹಾಕುವಾಗ ಮತ್ತು ಅದಕ್ಕೂ ಮೊದಲು ನಮ್ಮ ತಂದೆಗೂ ಲಕ್ಷ್ಮಯ್ಯನಿಗೂ ಮಾತು ಇರಲಿಲ್ಲ, ಅಷ್ಟಕ್ಕೆ ಅಷ್ಟೇ ಇದ್ದರು ಎಂದರೆ ಸರಿಯಲ್ಲ. ಸದರಿ ಮಾತುಕತೆ ಸಾತನೂರು ಹೊಸಹಳ್ಳಿಯಲ್ಲಿ ಆಗಿರುತ್ತದೆ.

ಬರವಣಿಗೆ ಯಾವ ವರ್ಷ, ತಿಂಗಳು ಮತ್ತು ಯಾವ ದಿನಾಂಕದಂದು ಆಗಿರುತ್ತದೆ ಎಂದು ಗೊತ್ತಿಲ್ಲ ಕಾರಣ ನಾನು ಓದಿಲ್ಲ. ಸದರಿ ದಾಖಲೆಯನ್ನು ಹೊಸಹಳ್ಳಿಯ ಮುನಿರಾಜು ಬರೆದಿರುತ್ತಾರೆ. ಅದಕ್ಕೆ ಯಾರು ಸಾಕ್ಷಿ ಹಾಕಿದ್ದಾರೆ ಎಂದರೆ ಸಾಕ್ಷಿಯು ಅವರ ಹೆಸರು ಗೊತ್ತಿಲ್ಲ, ಆದರೆ ಹೊಸಹಳ್ಳಿಯವರು ಹಾಕಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಬರವಣಿಗೆ ಮಾಡಿದವರು ಮತ್ತು ಸಾಕ್ಷಿದಾರರು ಬದುಕಿದ್ದಾರೆ, ಅವರನ್ನು ವಿಚಾರಣೆ ಮಾಡಿಸಬಲ್ಲೆ.

**8)** ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ನಂ.3 ರವರ ವಾರಸ್ಸುದಾರರ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**